# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1130 |
| ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20-12-2018 |
| ಉತ್ತರಿಸಬೇಕಾದ ಸಚಿವರು | ಉನ್ನತ ಶಿಕ್ಷಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಅರೆಕಾಲಿಕ ಉಪನ್ಯಾಸಕರನ್ನು ಹಂತ ಹಂತವಾಗಿ ಖಾಯಂ ಮಾಡುವುದಾಗಿ ಚುನಾವಣೆ ವೇಳೆ ಭರವಸೆ ನೀಡಲಾಗಿದ್ದು; ಸರ್ಕಾರ ಅದರ ಅನುಷ್ಠಾನದ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ; ಅದು ಯಾವ ಹಂತದಲ್ಲಿ ಇದೆ? (ವಿವರ ನೀಡುವುದು) | <u>ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರ ಸೇವಾ ಸಕ್ರಮಾತಿಗೆ ಸಂಬಂಧಿಸಿದಂತೆ,</u> ದಿನಾಂಕ:22/01/1997 ರ ಸಂಖ್ಯೆ: ಡಿಪಿಎಆರ್/48/ ಎಸ್ಆರ್ಇ/96 ರ ಸರ್ಕಾರಿ ಅಧಿಸೂಚನೆ ಹಾಗೂ ತದನಂತರ ದಿನಾಂಕ: 04/01/2001ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ: 09/07/2002ರ ಸಂಖ್ಯೆ: ಡಿಪಿಎಆರ್/ 55/ಎಸ್ಆರ್ಇ/2001ರ ಸರ್ಕಾರಿ ಅಧಿಸೂಚನೆಗಳಲ್ಲಿ ಹೊರಡಿಸಲಾದ ಪರಿಷ್ಕೃತ ನಿಯಮಗಳನ್ವಯ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95ರಲ್ಲಿ ಸೇವೆ ಸಲ್ಲಿಸಿರುವ ಅರೆಕಾಲಿಕ ಉಪನ್ಯಾಸಕರುಗಳನ್ನು. ಉಪನ್ಯಾಸಕರ ಖಾಲಿ ಹುದ್ದೆಗೆ ಎದುರಾಗಿ ಒಟ್ಟು-558 ಅರೆಕಾಲಿಕ ಉಪನ್ಯಾಸಕರನ್ನು ಸೇವಾ ಸಕ್ರಮಾತಿಗೊಳಿಸಿ ಆದೇಶಿಸಲಾಗಿದೆ.<br><br><u>ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರ ಸೇವಾ ಸಕ್ರಮಾತಿಗೆ ಸಂಬಂಧಿಸಿದಂತೆ,</u> ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/56/ಯುಪಿಸಿ/97 ದಿನಾಂಕ: 12.02.2004ರಲ್ಲಿ Karnataka Educational Institutions (Absorption of persons working as Part time Lecturers in the Aided Private Educational Institutions) (Special) Rules, 2003 ರಲ್ಲಿ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರನ್ನು ಸೇವಾ ಸಕ್ರಮಾತಿಗೊಳಿಸಲು ಅವಕಾಶ ಕಲ್ಪಿಸಿದ್ದು, ಅದರಂತೆ ಖಾಸಗಿ |

| | | |
|---|---|---|
| | | ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಹಾಗೂ 1994-95ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಸೇವಾ ಸಕ್ರಮಾತಿಗೆ ಅರ್ಹತೆ ಪಡೆದಿರುವ ಒಟ್ಟು-412 ಅರೆಕಾಲಿಕ ಉಪನ್ಯಾಸಕರನ್ನು ಈಗಾಗಲೇ ಸೇವಾ ಸಕ್ರಮಾತಿಗೊಳಿಸಲಾಗಿದೆ. |

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 330 ಡಿಸಿಇ 2018